# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 929 (1044) |
| ಸದಸ್ಯರ ಹೆಸರು | : | ಶ್ರೀ ಐವನ್ 'ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ದಿನಾಂಕ | : | 16.12.2025 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ STP ಘಟಕಗಳು ನಿಷ್ಕ್ರಿಯವಾಗಿದ್ದು, ಒಳಚರಂಡಿ ಕೊಳವೆ ನೀರು ಶುದ್ಧಿಕರಿಸದೆ ವಾಯು ಮಾಲಿನ್ಯ ಉಂಟಾಗಿದ್ದು, ಕೊಳವೆ ನೀರು ರಸ್ತೆ ಮತ್ತು ತೋಡುಗಳಲ್ಲಿ ಹರಿಯುತ್ತಿರುವುದರ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು: (ವಿವರ ನೀಡುವುದು) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 4 STP ಗಳು ಕಾರ್ಯನಿರ್ವಹಿಸುತ್ತಿವೆ:<br><br>1) ಕಾವೂರು STP 43.5 MLD<br>2) ಬಜಾಲ್ STP 20.5 MLD<br>3) ಸುರತ್ಕಲ್ STP 16.5 MLD<br>4) ಪಚ್ಚನಾಡಿ STP 8.75 MLD<br><br>ಕಾವೂರು STP 43.5 MLD ಸಂಸ್ಕರಿಸಿದ ನೀರನ್ನು MSEZ ಮೂಲಕ ಕೈಗಾರಿಕೆಗಳಿಕೆ ಮರು ಬಳಕೆಗೆ ನೀಡಲಾಗುತ್ತದೆ. ಪಚ್ಚನಾಡಿ STP 8.75 MLD ಸಂಸ್ಕರಿಸಿದ ನೀರನ್ನು ಪಿಲಿಕುಳದಲ್ಲಿರುವ TTP 6.5 MLD ಮೂಲಕ ಸಂಸ್ಕರಿಸಿ ಹತ್ತಿರದ ಮುಖ್ಯ ನಿಸರ್ಗಧಾಮ ಮತ್ತು ಮಂಗಳೂರು ಗಾಲ್ಫ್ ಕ್ಲಬ್ ಗೆ ನೀಡಲಾಗುತ್ತಿದೆ. ಬಜಾಲ್ STP, ಸುರತ್ಕಲ್ STP ಯ ಸಂಸ್ಕರಿಸಿದ ನೀರನ್ನು ಹತ್ತಿರದ ರಾಜಕಾಲುವೆಗೆ ಹರಿಸಲಾಗುತ್ತಿದೆ.<br><br>NGT ಅನುದಾನದಲ್ಲಿ ಪಚ್ಚನಾಡಿ STP ಯನ್ನು ASP technology ಯಿಂದ SBR ಗೆ ಉನ್ನತಿಗೇರಿಸಲಾಗುತ್ತಿದೆ STP & Air defuser, Air blower ಹಾಗೂ ಅತ್ತಾವರ KMC ಹತ್ತಿರ ಹೊಸದಾಗಿ ವೆಟ್ ವೆಲ್ ನಿರ್ಮಾಣ ಮತ್ತು 8.14 ಕಿ.ಮೀ ಕೊಳವೆ ಮಾರ್ಗಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.<br><br>Jal Hi Amrut ಯೋಜನೆಯಡಿ ಬಜಾಲ್ ಮತ್ತು ಪಚ್ಚನಾಡಿ STP ಗಳಿಗೆ scada ಅಳವಡಿಸಲಾಗುತ್ತಿದ್ದು ಕಾವೂರು ಮತ್ತು ಸುರತ್ಕಲ್ STP ಗಳಿಗೆ Air defuser ಮತ್ತು Air blower ಅಳವಡಿಸಲಾಗುತ್ತಿದೆ. ಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಮುಂಚೂರು ವೆಟ್ ವೆಲ್ ಹಾಗೂ ಸುರತ್ಕಲ್ STP ಗಳನ್ನು ನಿರಂತರ ಕಾರ್ಯಾಚರಣೆಯಲ್ಲಿರಿಸಲು DG ಅಳವಡಿಸಲಾಗುತ್ತಿದೆ. |

| | | |
|---|---|---|
| ಆ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ STP ಘಟಕಗಳು ನಗರ ಪಾಲಿಕೆಯಿಂದ ನಿರ್ವಹಣೆ ಮಾಡಲು ಬೇಕಾದ ಆರ್ಥಿಕವಾಗಿ ಸಾಧ್ಯವಾಗದೆ ನಿಷ್ಕ್ರಿಯಗೊಂಡಿದ್ದು, ಇದನ್ನು ಕೈಗಾರಿಕೆಗಳು ಸಂಸ್ಥೆಯೊಂದಿಗೆ ಹೊಂದಾಣಿಕೆ ಒಪ್ಪಂದ ಮಾಡಿಕೊಂಡು ನಿರ್ವಹಿಸಲು ಇಲಾಖೆ ಕ್ರಮಕೈಗೊಳ್ಳದೆ ಇರಲು ಕಾರಣವೇನು: ಈಗಾಗಲೇ ಒಂದು STP ಘಟಕಗಳು ಈ ರೀತಿಯಿದ್ದು, ಒಡಂಬಡಿಕೆ ನೀಡಿದ್ದು, ಉಳಿದ STP ಘಟಕಗಳು ಬಗ್ಗೆ ಕ್ರಮ ಕೈಗೊಳ್ಳುವುದು | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 4 STP ಗಳು ಕಾರ್ಯನಿರ್ವಹಿಸುತ್ತಿವೆ ಯಾವುದೇ STP ಗಳು ನಿಷ್ಕ್ರಿಯಗೊಂಡಿರುವುದಿಲ್ಲ. ಸುರತ್ಕಲ್ STP ಯಿಂದ ಸಂಸ್ಕರಿಸಿದ ನೀರನ್ನು MRPL ನೀಡುವ ಸಂಬಂಧ ಪತ್ರ ವ್ಯವಹಾರ ನಡೆಸಲಾಗಿದ್ದು ಯಾವುದೇ ಧನಾತ್ಮಕ ಪ್ರತಿಕ್ರಿಯೆ ಬಂದಿರುವುದಿಲ್ಲ. ಬಜಾಲ್ STP ಯಿಂದ ಸಂಸ್ಕರಿಸಿದ ನೀರನ್ನು ಕಾವೂರು STP ಮೂಲಕ ಕೈಗಾರಿಕೆಗೆ ಮರುಬಳಕೆ ನೀಡಲು ಸುಮಾರು 80.00 Cr ಅವಶ್ಯಕತೆ ಇರುತ್ತದೆ. ಹಾಗೂ ಸುರತ್ಕಲ್ STP ಯಿಂದ ಸಂಸ್ಕರಿಸಿದ ನೀರನ್ನು 1 ಸಂಖ್ಯೆ TTP ಅಳವಡಿಸಿ MRPL ಗೆ ಕೊಳವೆ ಅಳವಡಿಸಿ ಪಂಪಿಂಗ್ ಮಾಡಲು ಸುಮಾರು 90.00 Cr ಅವಶ್ಯಕತೆ ಇರುತ್ತದೆ. |
| ಇ) | ಕೈಗಾರಿಗಳಿಗೆ ಒಳಚರಂಡಿಯ ನೀರನ್ನು ಶುದ್ಧಕರಿಸಿ ಕೈಗಾರಿಕೆಗಳಿಗೆ ಬಳಕೆ ಮಾಡಲು ಬೇಡಿಕೆ ಇದ್ದರೂ ಇಲಾಖೆ ಕ್ರಮ ಕೈಗೊಳ್ಳದೆ ಇರಲು ಕಾರಣವೇನು; (ಉದಾ: MRPL ಕೈಗಾರಿಕಾ ಬೇಡಿಕೆ ಇದೆ) | ಸುರತ್ಕಲ್ STP ಯಿಂದ ಸಂಸ್ಕರಿಸಿದ ನೀರನ್ನು MRPL ನೀಡುವ ಸಂಬಂಧ ಪತ್ರ ವ್ಯವಹಾರ ನಡೆಸಲಾಗಿದ್ದು ಯಾವುದೇ ಧನಾತ್ಮಕ ಪ್ರತಿಕ್ರಿಯೆ ಬಂದಿರುವುದಿಲ್ಲ. |
| ಈ) | ಸುರತ್ಕಲ್ ಮಧ್ಯದಲ್ಲಿ STP ಘಟಕಗಳ ನೀರು ಕೊಳಚೆ ನೀರು ನಂದಿನಿ ನದಿಗೆ ಬಿಟ್ಟು ಅಲ್ಲಿ ವಾಯು ಮಾಲಿನ್ಯ ಉಂಟಾಗಿದ್ದು, ಕೊಳಚೆ ನೀರಿನಿಂದ ರೋಗ ರುಜಿನಗಳು ಉಂಟಾಗಿದ್ದು, ಮಾಲಿನ್ಯ ಇಲಾಖೆ ನೋಟೀಸು ನೀಡಿದ್ದರೂ ಮಾಲಿನ್ಯ ಇಲಾಖೆ ಕೇಸು ದಾಖಲಿಸಿರುವುದು ಇಲಾಖೆಯ ಗಮನದಲ್ಲಿದೆಯೇ; (ವಿವರ ನೀಡುವುದು) | ಮಂಗಳೂರು ಮಹಾನಗರಪಾಲಿಕೆ ಮೇಲೆ ಈಗಾಗಲೇ 2 NGT case, 1 ಸಂಖ್ಯೆ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿದ್ದು ವಿಚಾರಣಾ ಹಂತದಲ್ಲಿರುತ್ತದೆ. |
| ಉ) | ಒಳಚರಂಡಿ ನೀರು ಶುದ್ಧಿಕರಿಸದೇ ಬಾವಿಗಳಿಗೆ ಮತ್ತು ಸಾರ್ವಜನಿಕರ ತೋಡುಗಳಲ್ಲಿ ಹರಿದು ವಾಯು ಮಾಲಿನ್ಯ ಉಂಟಾಗಿದ್ದು, ನಗರ ಪಾಲಿಕೆಯ ಇಲಾಖೆ ಮೇಲೆ ಎಷ್ಟು ಕೇಸ್ ದಾಖಲಾಗಿದೆ; ಕೇಸು ಯಾವ ಹಂತದಲ್ಲಿದೆ; (ವಿವರ ನೀಡುವುದು) | ಮಂಗಳೂರು ಮಹಾನಗರಪಾಲಿಕೆ ಮೇಲೆ ಈಗಾಗಲೇ 2 NGT case, 1 ಸಂಖ್ಯೆ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿದ್ದು ವಿಚಾರಣಾ ಹಂತದಲ್ಲಿರುತ್ತದೆ. |
| ಊ) | ಸ್ಮಾರ್ಟ್ ಸಿಟಿ ಯೋಜನೆ ಒಳಚರಂಡಿ ಸರಿಪಡಿಸುವ ಬಗ್ಗೆ ಹಣವನ್ನು ಮೀಸಲಿಡದೆ; ಇತರ ಕಾರ್ಯಗಳಿಗೆ ಬಳಕೆ ಮಾಡಿರುವುದರಿಂದ ಸ್ಮಾರ್ಟ್ ಸಿಟಿ ಉದ್ದೇಶಕ ಪೂರಕ ನಡೆಸಿದೆಯೆ; (ವಿವರ ನೀಡುವುದು) | ಸ್ಮಾರ್ಟ್ ಸಿಟಿ ಯೋಜನೆಯಡಿ 4 ಸಂಖ್ಯೆ ವೆಟ್ ವೆಲ್ ಗಳನ್ನು (ಕುದ್ರೋಳಿ, ಪಾಂಡೇಶ್ವರ, ಕೊಡಿಯಾಲ್ ಗುತ್ತು, ಕಡೆಕಾರ್) ಅಭಿವೃದ್ಧಿಪಡಿಸಲು 14.00 Cr ಮೀಸಲಿಟ್ಟಿದ್ದು, ಸದರಿ ವೆಟ್ ವೆಲ್ ಗಳಲ್ಲಿ Electro mechanical equipment ಗಳನ್ನು ಉನ್ನತ್ತೀಕರಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| ಋ) | ನಗರದ STP ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಕೇವಲ ಹಾಜರಾತಿ ಮಾತ್ರ ಹಾಕಿ ಅನ್ಯ ಕಾರ್ಯಗಳಲ್ಲಿ ತೊಡಗಿರುತ್ತಾರೆ ಎಂಬ ದೂರುಗಳಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು? (ವಿವರ ನೀಡುವುದು) | ಈ ಬಗ್ಗೆ ಪಾಲಿಕೆಯಲ್ಲಿ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ನಅಇ 82 ಎಂಎಂಸಿ 2025 (ಇ)**

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು